**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ**

**ಸಿಸಿ ನಂ 50/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 18-09-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ನಾಗರಾಜ ಕಡಬಿ | | **ಪ್ರಾ.ಸಾ ಃ 09** |
| **ತಂದೆ ಃ ಗಂಡ ಹೆಸರು** | ಃ ಭುಜಬಲಿ | | **ಚಾ.ಸಾ ಃ 10** |
| **ವಯಸ್ಸು** | ಃ 56 ವರ್ಷ | | |
| **ಉದ್ಯೋಗ** | ಃ ವ್ಯಾಪಾರ | | |
| **ವಾಸಸ್ಥಳ** | ಃ ಕಲಘಟಗಿ | | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ರವರ ಪರಿಚಯ ಇಲ್ಲ. ಕಲಘಟಗಿ ಪಟ್ಟಣದ ಎ ಪಿ ಎಂ ಸಿ ಹತ್ತಿರ, ಹುಬ್ಬಳ್ಳಿ ಕಾರವಾರ ರಸ್ತೆ ಪಕ್ಕ ನನಗೆ ಸೇರಿದ ವಾಣಿಜ್ಯ ಕಟ್ಟಡ ಇದ್ದು ಅದರ ನಂ 190/5/3 ಸದರಿ ಕಟ್ಟಡವನ್ನು ನಾನು ಸ್ಟೇಟ್ ಬ್ಯಾಂಕ ಆಫ್ ಮೈಸೂರ ಕಲಘಟಗಿ ಶಾಖೆಗೆ ಸೇರಿದ ಬ್ಯಾಂಕಿಗೆ 1ನೇ ಮಹಡಿಯನ್ನು ಬಾಡಿಗೆಗೆ ಕೊಟ್ಟಿರುತ್ತೇನೆ. ಸದರಿ ಬ್ಯಾಂಕ 2017 ರಲ್ಲಿ ಸ್ಟೇಟ ಬ್ಯಾಂಕ ಆಫ್ ಇಂಡಿಯಾದಲ್ಲಿ ವಿಲಿನಗೊಂಡ ನಂತರ ಬ್ಯಾಂಕನ್ನು ಸ್ಥಳಾಂತರ ಮಾಡಿರುತ್ತಾರೆ. ನಂತರ ಸೆಂಟೆಮಿಲಾಗ್ರಿಸ್ ಬ್ಯಾಂಕಿನವರು ಬಾಡಿಗೆಗೆ ಬಂದಿದ್ದು ಈಗ ಶ್ರೀರಾಮ ಪೈನಾನ್ಸನವರು ಬಾಡಿಗೆಗೆ ಇದ್ದಾರೆ. ನಾನು ಬ್ಯಾಂಕಿನೊಂದಿಗೆ ಮಾಡಿಕೊಂಡಿದ್ದ ಕರಾರು ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಬ್ಯಾಂಕಿನೊಂದಿಗೆ ಮಾಡಿಕೊಂಡ ಲೀಜ್ ಡಿಡ್ ಅಗ್ರಿಮೆಂಟ್ ಹಾಗೂ ಆಸ್ತಿ ಉತಾರ ಜರಾಕ್ಸ ಪ್ರತಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಗೇಣಿ ಕರಾರು ಪತ್ರ ಮತ್ತು ಆಸ್ತಿ ಉತಾರನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಯಾವ ದಿನಾಂಕಂದು ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿದ್ದೇನೆಂದು ಹೇಳಲು ಬರುವುದಿಲ್ಲ. ಯಾವ ಅಧಿಕಾರಿಗೆ ಕೊಟ್ಟಿದ್ದೇನೆಂದು ಹೇಳಲು ಬರುವುದಿಲ್ಲ. ದಾಖಲೆಯನ್ನು ಪೋಲೀಸರಿಗೆ ನೀಡಿದ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ನಾನು ಕೊಟ್ಟ ದಾಖಲೆಗಳನ್ನು ಪೋಲೀಸರು ಪಂಚನಾಮೆ ಮಾಡಿ ಪಡೆದುಕೊಂಡಿಲ್ಲ. ನಾನು ಪೋಲೀಸರಿಗೆ ದಾಖಲೆಗಳನ್ನು ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.